ಈ) ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಸಹ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 8.10.91ರಲ್ಲಿ ಪ್ರಕಟಿಸಿದ್ದು ಜೇಷ್ಠತೆ ಮೇಲೆ ಉಪನ್ಯಾಸಕರಾಗಿ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಬಡ್ತಿಗೆ ಅರ್ಹ ಸಹ ಶಿಕ್ಷಕರು ಲಭ್ಯವಿಲ್ಲದ ವಿಷಯಗಳಲ್ಲಿ ನೇರ ನೇಮಕಾತಿಯಿಂದ ಹುದ್ದೆಗಳನ್ನು ತುಂಬುವ ವಿಷಯ ಪರಿಶೀಲನೆಯಲ್ಲಿದೆ.

## ಕಳೆದ ಮೂರು ವರ್ಷಗಳಿಂದ ಪ್ರಾರಂಭವಾದ ಪ್ರಾಥಮಿಕ ಶಾಲೆಗಳ ಸಂಖ್ಯೆ

482 (821). ಶ್ರೀ ಕೆ. ಪ್ರದಾಪಚಂದ್ರ (ಕುಂದಾಪುರ):- ಮಾನ್ಯ ಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಪ್ರಾರಂಭಿಸಲಾದ ಪ್ರಾಥಮಿಕ ಶಾಲೆಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಈ ಶಾಲೆಗಳಲ್ಲಿ ಮೂಲಭೂತ ಬೇಡಿಕೆಯಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) 965.

ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ.

### ಜಿಲ್ಲಾವಾರು ಪಟ್ಟಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಕಳೆದ ಮೂರು ವರ್ಷಗಳಿಂದ ಪ್ರಾರಂಭಿಸಲಾದ ಪ್ರಾಥಮಿಕ ಶಾಲೆಗಳ ಸಂಖ್ಯೆ |
|---|---|---|
| 1. | ಬೆಂಗಳೂರು ಉತ್ತರ ಜಿಲ್ಲೆ | 16 |
| 2. | ಬೆಂಗಳೂರು ದಕ್ಷಿಣ ಜಿಲ್ಲೆ | 41 |
| 3. | ಬೆಂಗಳೂರು ಗ್ರಾಮಾಂತರ ಜಿಲ್ಲೆ | 101 |
| 4. | ಕೋಲಾರ ಜಿಲ್ಲೆ | 40 |
| 5. | ತುಮಕೂರು ಜಿಲ್ಲೆ | 26 |
| 6. | ಶಿವಮೊಗ್ಗ ಜಿಲ್ಲೆ | 72 |
| 7. | ಚಿತ್ರದುರ್ಗ ಜಿಲ್ಲೆ | 217 |
| 8. | ಮೈಸೂರು ಜಿಲ್ಲೆ | 65 |
| 9. | ದಕ್ಷಿಣಕನ್ನಡ ಜಿಲ್ಲೆ | 43 |
| 10. | ಮಂಡ್ಯ ಜಿಲ್ಲೆ | 47 |
| 11. | ಹಾಸನ ಜಿಲ್ಲೆ | 72 |
| 12. | ಚಿಕ್ಕಮಗಳೂರು ಜಿಲ್ಲೆ | - |
| 13. | ಮಡಿಕೇರಿ ಜಿಲ್ಲೆ | 03 |
| 14. | ಬೆಳಗಾಂ ಜಿಲ್ಲೆ | 61 |
| 15. | ಬಿಜಾಪುರ ಜಿಲ್ಲೆ | 34 |
| 16. | ಧಾರವಾಡ ಜಿಲ್ಲೆ | 34 |
| 17. | ಉತ್ತರ ಕನ್ನಡ ಜಿಲ್ಲೆ | 84 |
| 18. | ಗುಲ್ಬರ್ಗ ಜಿಲ್ಲೆ | |

| | | |
|---|---|---|
| 19. | ರಾಯಚೂರು ಜಲ್ಲೆ | |
| 20. | ಬೀದರ್ ಜಿಲ್ಲೆ | 06 |
| 21. | ಬಳ್ಳಾರಿ ಜಿಲ್ಲೆ | 03 |
| | ಒಟ್ಟು | 965 |

## ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೇ ದರ್ಜೆ ನೌಕರರ ನೇಮಕಾತಿ

483 (837). ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪ್ರಾಥಮಿಕ ಶಾಲೆಗಳಿಗೆ (1 ರಿಂದ 7) ನಾಲ್ಕನೇ ದರ್ಜೆ ನೌಕರರ ಹುದ್ದೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಶಾಲಾ ವಿದ್ಯಾರ್ಥಿಗಳೇ ಶಾಲಾ ಆವರಣವನ್ನು ಸ್ವಚ್ಛಗೊಳಿಸಲು ಕಾರಣವೇನು?

ಇ) ಸರ್ಕಾರವು ಈ ನಾಲ್ಕನೇ ದರ್ಜೆ ನೌಕರರನ್ನು ತಕ್ಷಣವೇ ನೇಮಕ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಲಿ (ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) ಸಮಾಜ ಸೇವೆಯ ಅಂಗವಾಗಿ ವಿದ್ಯಾರ್ಥಿಗಳು ಶಾಲಾ ಆವರಣವನ್ನು ಸ್ವಚ್ಛಗೊಳಿಸುತ್ತಿದ್ದಾರೆ.

ಇ) ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ನೇಮಕಾತಿಗೆ ಅವಕಾಶವಿರುವುದಿಲ್ಲ.

## ಶಹಾಬಾದ್ ಪಟ್ಟಣದಲ್ಲಿ ನ್ಯಾಯಾಲಯದ ಸ್ಥಾಪನೆ

484 (838). ಶ್ರೀ ಬಾಬುರಾವ್ ಚೌವಾಣ್ (ಶಹಾಬಾದ್):- ಮಾನ್ಯ ಕಾನೂನು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್ ಪಟ್ಟಣದಲ್ಲಿ ಮಧ್ಯ ಕಾಲೀನ ನ್ಯಾಯಾಲಯವು ಮಂಜೂರು ಆಗಿದ್ದರೂ ಕೂಡಾ ಇದುವರೆವಿಗೂ ಪ್ರಾರಂಭವಾಗದಿರಲು ಕಾರಣವೇನು?

ಆ) ಬಾಡಿಗೆ ಕಟ್ಟಡವು ದೊರೆತಲ್ಲಿ ಅಲ್ಲಿ ನ್ಯಾಯಲಯವನ್ನು ಪ್ರಾರಂಭಿಸಲಾಗುವುದೇ?

ಇ) ಹಾಗಿದ್ದಲ್ಲಿ ಸರ್ಕಾರದ ನಿಲುವೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಾನ್ಯ ಕಾನೂನು ಸಚಿವರು):-

ಅ) ಸರಿಯಾದ ಕಟ್ಟಡ ದೊರೆತಿಲ್ಲದಿರುವುದರಿಂದ ಮಧ್ಯಕಾಲೀನ ನ್ಯಾಯಾಲಯವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಆ) ಸೂಕ್ತವಾದ ಬಾಡಿಗೆ ಕಟ್ಟಡವು ದೊರೆತಲ್ಲಿ ನ್ಯಾಯಾಲಯವನ್ನು ಪ್ರಾರಂಭಿಸಲಾಗುವುದು.

ಇ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.